ನಾವೂ ಈವರೆಗೆ ಸಾಕಷ್ಟು ತಾಳ್ಮೆಯಿಂದ ಸಹಿಸುತ್ತಾ ಬಂದೆವು. ನಿನ್ನ ಹಣದಿಂದ ಹೊಲೆಯರಿಗೆ ಬಾವಿ ತೋಡಿಸಿಕೊಟ್ಟೆ, ಬಟ್ಟೆ ಬರೆ ಕೊಟ್ಟೆ, ಸಾಗುವಳಿಗೆ ಜಮೀನು ಕೊಟ್ಟೆ. ಎಲ್ಲಾದರೂ ಹಾಳಾಗಲಿ, ನಿನ್ನ ಪಾಪದ ಕರ್ಮ ನಿನಗೆ, ಎಂದು ಸುಮ್ಮನಿದ್ದೆವು. ಈಗ ಈ ಅಸ್ಪೃಶ್ಯ ಹೊಲೆಯರನ್ನು ಊರೊಳಕ್ಕೂ ತರುವ ಪ್ರಯತ್ನ ಮಾಡ್ತಿದೀಯ. ಇದು ನಿನ್ನೊಬ್ಬನ ನಿರ್ಧಾರದ ವಿಷಯವಲ್ಲ. ಊರಿಗೆಲ್ಲ ಸೇರಿದ್ದು. ಇಂದು ಈ ಹೊಲೆಯರು ಊರೊಳಕ್ಕೆ ಬರ್‍ತಾರೆ, ನಾಳೆ ನಮ್ಮ ಮನೆ ಮಂದಿರಗಳ ಒಳಕ್ಕೂ ಬರ್‍ತೀವಿ, ಅಂತಾರೆ. ನಮ್ಮೊಂದಿಗೆ ಕೂತು ಉಣ್ತೇವಿ, ಅಂತಾರೆ. ನಮ್ಮ ಹುಡುಗಿಯರನ್ನು ಮದುವೆ ಆಗ್ತೀವಿ, ಅಂತಾರೆ. ಮನಗೇನು ಜಾತಿ ಮತ, ಧರ್ಮಕರ್ಮ, ರೀತಿ ರಿವಾಜು ಇಲ್ಲವಾ? ಸನಾತನ ಧರ್ಮ ಮೀರಿ ಹೋದರೆ, ಊರಿಗೇ ಅನಿಷ್ಟ ಬಡಿಯುತ್ತೆ. ನಾವೆಲ್ಲ ಸರ್ವನಾಶವಾಗಿ ಹೋಗ್ತೇವೆ. ಹೀಗಾಗಲು ನಾವು ಎಂದಿಗೂ ಅವಕಾಶ ಕೊಡೋರಲ್ಲ.'

ಚಂದ್ರ ಹೇಳಿದ, 'ನಿಮ್ಮ ಮಾತಿಗೆ ಅರ್ಥ ಇಲ್ಲ, ಹೊಲೆಯರು ಊರೊಳಕ್ಕೆ ಬಂದರೆ ಊರೇ ಹೇಗೆ ನಾಶವಾಗುತ್ತೆ? ಅದೆಲ್ಲ ನಿಮ್ಮ ಮೂಢನಂಬಿಕೆ. ನಾನು ಹುಟ್ಟಿದಾಗಿಂದ ಈ ಊರಲ್ಲೇ, ನಿಮ್ಮೆಲ್ಲರೊಂದಿಗೇ ಬೆಳೆಯುತ್ತಾ ಬಂದಿದ್ದೀನಲ್ಲ, ಊರಿಗೇನು ಅನಿಷ್ಟ ಬಡಿದಿದೆ?' ಪಂಚಾಯಿತಿ ಹೇಳಿತು, 'ನೀನು ನಮ್ಮವನು'. ಈಗ ಚಂದ್ರ ಭಂಡ ಧೈರ್ಯದಿಂದ ಬಯಲಾದ. 'ನಾನೂ ಸಹ ಒಂದರ್ಥದಲ್ಲಿ ಹೊಲೆಯನೇ. ನನ್ನ ತಂದೆ ಜಮೀನ್ದಾರ ಜಗ್ಗಯ್ಯ ರೆಡ್ಡಿಯೇ ನಿಜ. ಆದರೆ ನನ್ನ ತಾಯಿ ಒಬ್ಬ ಹೊಲತಿ. ಈ ಊರಾಚೆಯ ಹೊಲಗೇರಿಯಲ್ಲಿರುವ ಬಡಪಾಯಿ ಮುದುಕಿ ಎಂಕ್ಟಿ.'

ಜನ ದಂಗಾದರು. ಯಾರೂ ಚಂದ್ರನ ಮಾತನ್ನು ನಂಬಲಿಲ್ಲ. ಚಂದ್ರ ತನ್ನ ಹುಟ್ಟಿನ ಗುಟ್ಟನ್ನು ಅವರೆಲ್ಲೆದುರು ಬಿಚ್ಚಿದ್ದ. ಬೇಕಿದ್ರೆ ರುಜುವಾತು ಮಾಡಿ ತೋರಿಸುತ್ತೇನೆಂದ. ಜನ ಅವಾಕ್ಕಾದರು. 'ಈಗ ಏನು ಹೇಳ್ತೀರಿ?' ಚಂದ್ರ ಗೆದ್ದವನ ಗತ್ತಿನಲ್ಲಿ ವ್ಯಂಗ್ಯ ನಗೆ ಬೀರುತ್ತಾ ಸವಾಲೆಸೆದ.

ಪಂಚಾಯಿತಿಯ ಹಿರಿಯರು ಗುಸು ಗುಸು ತಮ್ಮಲ್ಲೇ ಮಾತಾಡಿಕೊಂಡರು. ನಂತರ ವಯೋವೃದ್ಧ ಶ್ರೀನಿವಾಸ ಶಾಸ್ತ್ರಿ ಹೇಳಿದರು, 'ನಿನ್ನ ಮಾತು ನಮಗೆ ನಂಬಲಿಕ್ಕಾಗ್ತಿಲ್ಲ. ಒಂದು ವೇಳೆ ನೀನು ಹೇಳುತ್ತಿರುವ ಅಸಹ್ಯ ನಿಜವೇ ಆಗಿದ್ದಲ್ಲಿ, ನೀನು ಈ ಊರಲ್ಲಿರಕೂಡದು. ಅದು ನಿನಗೂ ಒಳ್ಳೆಯದಲ್ಲ. ನಮಗೂ ಒಳ್ಳೆಯದಲ್ಲ. ಆದ್ದರಿಂದ ಊರಿನ ಒಳತಿಗಾಗಿ ನೀನು ಊರು ಬಿಟ್ಟು ಹೋಗು ಅಥವಾ ಊರಹೊರಗಿನ ಹೊಲಗೇರಿಗೆ ಹೋಗಿ, ನಿನ್ನವರೊಂದಿಗೆ ಬದುಕು ಚಂದ್ರ ಸಿಡಿಮಿಡಿಹೊಂಡು ಹೇಳಿದ, 'ನನ್ನನ್ನು ಊರಿಂದ ಹೊರಹಾಕುವ ಅಧಿಕಾರ ನಿಮಗೇನಿದೆ? ನಾನು ಹೋಗೋದಿಲ್ಲ ಅಂದ್ರೆ ನೀವೇನು ಮಾಡ್ತೀರಿ?' ಜಗ್ಗಯ್ಯರೆಡ್ಡಿಗೆ ಪ್ರಚ್ಛನ್ನಶತ್ರುವಾಗಿದ್ದ ವೃದ್ಧ ರಂಗಾರೆಡ್ಡಿ ಗರ್ಜಿಸಿದರು, 'ಬಲಾತ್ಕಾರದಿಂದ ಊರ ಹೊರಕ್ಕೆ ತಳ್ಳಿಸಬೇಕಾಗುತ್ತೆ'. ಚಂದ್ರ ಕೊಂಚ ಅಧೀರನಾಗಿ, ಮನವೊಲಿಸುವ, ಅಂಗಲಾಚುವ ದನಿಯಲ್ಲಿ ಹೇಳಿದ, 'ನೀವು ಕೊಂಚ ಉದಾರವಾಗಿ ಮಾನವೀಯವಾಗಿ ಯೋಚಿಸಿ ನೋಡಿ. ನನ್ನ ವಾದದಲ್ಲಿ ತಪ್ಪೇನಿದೆ? ಹೊಲೆಯರೂ ನಿಮ್ಮಂತೆ ಮನುಷ್ಯರಲ್ಲವೇ? ನಗರ ಪಟ್ಟಣಗಳಲ್ಲಿ ಅಸ್ಪೃಶ್ಯತಾ ನಿವಾರಣೆಯ ಕಾನೂನುಗಳು ಜಾರಿಗೆ ಬಂದಿವೆ. ಪ್ರಪಂಚ ಬದಲಾಯಿಸ್ತಾ ಇದೆ. ನಾವೂ ಬದಲಾಗಬೇಕು' ಕೃಷ್ಣಯ್ಯಸೆಟ್ಟಿ ಹೇಳಿದರು, 'ನಗರ ಪಟ್ಟಣಗಳು ಎಷ್ಟು ಗಬ್ಬೆದ್ದು ಹೋಗಿವೆ, ಅಂತ ನಮಗೂ ಗೊತ್ತು. ಎಲ್ಲಾ ದರಿದ್ರ ಇಂಗ್ಲಿಷ್ ವಿದ್ಯಾಭ್ಯಾಸದ ಪ್ರಭಾವ'.